ದ. ಕನ್ನಡ ಕೃಷಿಕರ ಸಹಕಾರ ಮಾರಾಟ ಸಂಘದ ಬಗ್ಗೆ

2026 - ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992ರಿಂದ 31.7.95ರವರೆಗೆ ದಕ್ಷಿಣ ಕನ್ನಡ ಕೃಷಿ ಸಹಕಾರಿ ಮಾರಾಟ ಸಂಘದ ಪ್ರತಿ ವರ್ಷ ಎಷ್ಟು ಮೈಲು-ತುತ್ತುನ್ನು ಖರೀದಿ ಮಾಡಿದೆ; ಯಾವ ಯಾವ ಕೃಷಿ ಸಂಘಗಳಿಗೆ ಮಾರಾಟ ಮಾಡಿದೆ;

ಆ) ಈ ವ್ಯವಹಾರದಲ್ಲಿ ಸಂಘವು ತೊಡಗಿಸಿರುವ ಬಂಡವಾಳ ಎಷ್ಟು ಮತ್ತು ಗಳಿಸಿದ ಲಾಭ-ನಷ್ಟ ಎಷ್ಟು;

ಇ) ಸಂಕೀರ್ಣ ವಿಭಾಗದಲ್ಲಿ (ಬಾಳೇಕಾಯಿ ವಗೈರೆ ಮಾರಾಟ) 31.7.95ಕ್ಕೆ ಖರೀದಿದಾರದಿಂದ ಸಂಘಕ್ಕೆ ಬರಲು ಬಾಕಿ ಮೊಬಲಗು ಎಷ್ಟು;

ಈ) ಅಡಿಕೆ ವ್ಯವಹಾರದಲ್ಲಿ ದಿನಾಂಕ: 31.7.95ಕ್ಕೆ ಖರೀದಿದಾರದಿಂದ ಬರಲು ಬಾಕಿ ಇರುವ ಮೊಬಲಗು ಎಷ್ಟು?

ಉ) ಕೃಷಿ ಸಲಕರಣೆ ವ್ಯವಹಾರದಲ್ಲಿ ದಿನಾಂಕ : 31.7.1995ರವರೆಗೆ ತೊಡಗಿಸಿದ ಮೊಬಲಗು ಎಷ್ಟು; ಸಂಘಕ್ಕೆ ಉಂಟಾದ ಲಾಭ: ನಷ್ಟ ಎಷ್ಟು?

ಊ) ಸಹಕಾರಿ ಕಾಯ್ದೆ ಕಲಂ 64ರಂತೆ ಸಂಘದ ವ್ಯವಹಾರಗಳ ಬಗ್ಗೆ ತನಿಖೆಯಾಗಿ ಕಲಂ 68ರಂತೆ ನೀಡಿದ ನೋಟೀಸ್ ಬಗ್ಗೆ ಕೈಗೊಂಡ ಕ್ರಮಗಳೇನು?

ಋ) ಸದರಿ ಸಂಘದಲ್ಲಿ ಹಣಕಾಸು ಅವ್ಯವಹಾರ ಬೈಲಾ: ಸಹಕಾರಿ ಕಾನೂನು ಉಲ್ಲಂಘನೆ ಆಗಿದೆಯೇ? ಹಾಗಿದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) 1992 ರಿಂದ 31.7.1995ರವರೆಗೆ ದಕ್ಷಿಣ ಕನ್ನಡ ಕೃಷಿ ಮಾರಾಟ ಸಹಕಾರಿ ಸಂಘ ನಿ, ಮಂಗಳೂರು ಈ ಸಂಘವು ಮೈಲು-ತುತ್ತುನ್ನು ನೇರವಾಗಿ ಖರೀದಿ ಮಾಡಿರುವುದಿಲ್ಲ. ಹಾಗೂ ಯಾವುದೇ ಸಹಕಾರಿ ಸಂಘಗಳಿಗೆ ನೇರವಾಗಿ ಮಾರಾಟ ಮಾಡಿರುವುದಿಲ್ಲ.

ಆ) ಮೈಲು ತುತ್ತು ವ್ಯವಹಾರದಲ್ಲಿ ಈ ಸಂಘವು ಒಟ್ಟು ರೂ. 1,20,28,000.00ಗಳನ್ನು ಟ್ರಾವೆಂಕೂರ್ ಕೆಮಿಕಲ್ಸ ಅಂಡ್ ಮ್ಯಾನುಫ್ಯಾಕ್ಚರಿಂಗ್ ಸಂಸ್ಥೆಗೆ (ಟಿ.ಸಿ.ಎಂ.)ಗೆ ಮುಂಗಡವಾಗಿ ವಿವಿಧ ದಿನಾಂಕಗಳಲ್ಲಿ ನೀಡಿದೆ. ಈ ವ್ಯವಹಾರದಲ್ಲಿ ಸಂಘವು ಕೇವಲ ರೂ. 4,83,340.00 ಗಳನ್ನು ಕಮಿಷನ್ ರೂಪದಲ್ಲಿ ಪಡೆದಿದೆ.

ಇ) ದಿನಾಂಕ : 31.7.95ಕ್ಕೆ ಸಂಕೀರ್ಣ ವಿಭಾಗದಲ್ಲಿ ಬಾಳೇಕಾಯಿ ವಗೈರೆ ಮಾರಾಟದಿಂದ ರೂ. 19,83,979.20 ಪೈಸೆಗಳು, 26 ಖರೀದಿದಾರರಿಂದ ಸಂಘಕ್ಕೆ ಬರಲು ಬಾಕಿ ಇರುತ್ತದೆ. ಪಟ್ಟಿ ಲಗತ್ತಿಸಿದೆ. (ಅನುಬಂಧ)

ಈ) ಅಡಿಕೆ ವ್ಯವಹಾರದಲ್ಲಿ ದಿನಾಂಕ: 31.7.95ಕ್ಕೆ ಖರೀದಿದಾರಿಂದ ರೂ. 2,09,55,392.00ಗಳು ಸಂಘಕ್ಕೆ ಬರಲು ಬಾಕಿ ಇರುತ್ತದೆ.

ಉ) ಕೃಷಿ ಸಲಕರಣೆ ವ್ಯವಹಾರದಲ್ಲಿ ರೂ. 15,49,098.00 ಗಳನ್ನು ಗಣೇಶ ಕೃಷಿ ಏಜೆನ್ಸಿ, ಮಂಗಳೂರು, ಇವರಿಗೆ ಮುಂಗಡವಾಗಿ ನೀಡಲಾಗಿದೆ. ಈ ವ್ಯವಹಾರದಲ್ಲಿ ಸಂಘವು ರೂ. 2,39,879.00ಗಳನ್ನು ಕಮಿಷನ್ ರೂಪದಲ್ಲಿ ಪಡೆದಿದೆ.

ಊ) ಸಹಕಾರ ಸಂಘಗಳ ಕಾಯ್ದೆಯ ಕಲಂ 64ರ ವಿಚಾರಣಾ ವರದಿಯಲ್ಲಿ ಮೈಲು ತುತ್ತು ಅವ್ಯವಹಾರದಲ್ಲಿ ಸಂಘ ಟ್ರಾವೆಂಕೂರು ಕೆಮಿಕಲ್ಸ ಮತ್ತು ಮ್ಯಾನುಫ್ಯಾಕ್ಚರಿಂಗ್ ಸಂಸ್ಥೆ ಮತ್ತು ಕೆನರಾ ಕೃಷಿ ಏಜೆನ್ಸಿಯೊಂದಿಗೆ ತ್ರಿಪಕ್ಷ ಒಪ್ಪಂದದಲ್ಲಿ ರೂ. 13,60,811.00ಗಳ ನಷ್ಟ ಅನುಭವಿಸಿರುವುದಕ್ಕೆ ಸಂಘದ ಅಧ್ಯಕ್ಷರು, ನಿರ್ದೇಶಕರು, ಮಾಜಿ ಪ್ರಭಾರ ಕಾರ್ಯದರ್ಶಿಯಾದ ಶ್ರೀ ಕೆ. ರಾಮಯ್ಯಗೌಡ ಮತ್ತು ಹಾಲಿ ಇರುವ ಪ್ರಭಾರ ಕಾರ್ಯದರ್ಶಿಯಾದ ಶ್ರೀ ಎಂ.ಕೆ. ಸದಾಶಿವಯ್ಯ ಇವರು ಸಂಯುಕ್ತವಾಗಿ ಮತ್ತು ವ್ಯಯಕ್ತಿವಾಗಿ, ಜವಾಬ್ದಾರರಾಗಿರುತ್ತಾರೆ. ಇದಲ್ಲದೇ ಸಂಘದಲ್ಲಿ, ಲಾಭಗಳಿಕೆಯು 1992-93ನೇ ಸಾಲಿನಲ್ಲಿ ರೂ. 28,57,241.64ಗಳು ಇದದ್ದು, 93-94ನೇ ಸಾಲಿನಲ್ಲಿ ರೂ. 1,54,846.71ಕ್ಕೆ ಇಳಿದಿರುತ್ತದೆ. ಇದಲ್ಲದೆ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಕಲಂ 68ರಂತೆ ಸಂಘದ ಕಾರ್ಯದರ್ಶಿಗೆ ವಿಚಾರಣಾ ವರದಿಯಂತೆ ಕಾಯಿದೆಯ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು 2 ತಿಂಗಳು ಕಾಲಾವಕಾಶವನ್ನು ನೀಡಿರುತ್ತಾರೆ. ಸಂಘದ ಪ್ರಭಾರಕಾರ್ಯಗಳಿಗೆ ಆಡಳಿತ ಮಂಡಳಿಯ ನಿರ್ಣಯ ಸಂ: 46ರಂತೆ ಕೆನರಾ ಕೃಷಿ ಏಜೆನ್ಸಿಯ ವಿರುದ್ಧ ಕಾಯ್ದೆಯ ರೀತ್ಯಾ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿದೆ. ಸಂಘ ಕಾರ್ಯದರ್ಶಿ ದಿನಾಂಕ 10.6.95ರಂದು ಸದರಿ ಏಜೆನ್ಸಿಗೆ ನೋಟೀಸ್ ನೀಡಿರುತ್ತಾರೆ. ಈ ನೋಟೀಸಗೆ ಸದರಿ ಏಜೆನ್ಸಿಯ ಪತ್ರದ ದಿ. 27-6-95ರಂತೆ 21 ದಿವಸಗಳ ಕಾಲಾವಕಾಶವನ್ನು ಕೇಳಿರುತ್ತಾರೆ.

ಋ) ಸಂಘವು ಖಾಸಗಿ ಏಜೆನ್ಸಿಗಳ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುರುವುದು ಸಂಘದ ಬೈಲಾ ನಿಯಮ 2(13)ಕ್ಕೆ ವಿರುದ್ಧವಾಗಿ ನಡೆದು ಕೊಂಡಿರುತ್ತಾರೆ. ಇದರಿಂದ ಸಂಘದಲ್ಲಿ ರೂ. 13,60,811.00 ಗಳಿಗೆ ಸಂಘದ ಅಧ್ಯಕ್ಷರು ನಿರ್ದೇಶಕರು ಮಾಜಿ ಪ್ರಭಾರ ಕಾರ್ಯದರ್ಶಿಯಾದ ಶ್ರೀ ಕೆ. ರಾಮಯ್ಯಗೌಡ ಮತ್ತು ಹಾಲಿ ಇರುವ ಪ್ರಭಾರ ಕಾರ್ಯದರ್ಶಿಯಾದ ಶ್ರೀ ಎಂ.ಕೆ. ಸದಾಶಿವಯ್ಯನವರನ್ನು ಸಂಯುಕ್ತವಾಗಿ ಮತ್ತು ವೈಯಕ್ತಿಕವಾಗಿ ಜವಬ್ದಾರರನ್ನಾಗಿ ಮಾಡಲಾಗಿದೆ. ಇದಲ್ಲದೇ ಸಂಘದ ಸಿಬ್ಬಂದಿಯಾದ ಶ್ರೀ.ಎ. ರತ್ನರಾಜ ಹೆಗ್ಗಡೆಯವರಿಂದ ಬರಬೇಕಾಗಿರುವ ರೂ. 18.77 ಲಕ್ಷದ ವ್ಯವಹಾರಗಳಿಗೆ ಅವರ ಸ್ಥಿರ ಆಸ್ತಿಯನ್ನು ಕಲಂ 103(1)ರ ರೀತ್ಯಾ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಉಳಿಕೆ ಕಾಯಿದೆ ಕ್ರಮಗಳ ಪ್ರಗತಿಯನ್ನು ನಿರೀಕ್ಷಿಸಲಾಗಿದೆ.

ಅನುಬಂಧ

ದಿನಾಂಕ 31.7.95ರ ಅಂತ್ಯಕ್ಕೆ ಸಂಕೀರ್ಣ ವಿಭಾಗದಲ್ಲಿ ಮಾರಾಟ ಮಾಡಿದ ಬಾಳೆಕಾಯಿ ಇತ್ಯಾದಿಗಳ ಬಗ್ಗೆ ಖರೀದಿದಾರರಿಂದ ಸಂಘಕ್ಕೆ ಬರಬೇಕಾಗಿರುವ ಬಾಕಿಯ ವಿವರ :

ಕ್ರ. ಸಂ	*ಹೆಸರು*	*ಮೊಬಲಗು (ರೂ. ಪೈ)*
1.	ಯಸ್. ಅಬ್ದುಲ್ ಖಾದರ್	61378.00
2.	ಚಂದ್ರ	301042.95
3.	ಯಂ. ಪಕ್ರುದ್ದೀನ್	84875.15
4.	ಯಂ. ಜೋರ್ಜ	27779.90
5.	ಟಿ. ಕೃಷ್ಣ	243641.15
6.	ಪಿ.ವಿ. ಕುಂಞಬು	5929.10
7.	ಯು. ಮೈದಿನ್	272953.20
8.	ನಿಜಾಮ್	57440.00
9.	ಪದ್ಮ	159773.00
10.	ಪಕೀರ	163972.40
11.	ವಿಜಯ ಶೆಟ್ಟಿ	140297.10
12.	ಯಾಧವ ಶೆಟ್ಟಿ	189113.25
13.	ಸುರೇಶ್ ಬಾಬು	5705.00
14.	ಶರೀಫ್ ಟ್ರೇಡರ್ಸ್	396.00
15.	ರಘು	17772.00
16.	ಅರುಣ್	467.00
17.	ಪಿ.ವಿ. ಗೋಪಾಲ್	33004.00
18.	ಟಿ.ವಿ. ಬಾಳಿಗ	704.00
19.	ಪಿ.ಯಂ. ಮಹಮ್ಮದ್	2711.00
20.	ಯು. ಗೋಪಿನಾಥ್ ನಾಯಕ್	5522.00
21.	ಪೂವಪ್ಪ ಶೆಟ್ಟಿ	6423.00

22.	ಇಬ್ರಾಹಿಂ	5254.00
23.	ಅಜಯ	1131.00
24.	ಎಂ. ಮೊಹಮ್ಮದ್	175104.00
25.	ನಾಗೇಶ್	1591.00
26.	ಹರೀಶ್	-
		1963979.20
	ಸಾಮಾನ್ಯ ಖಾತೆಯ ಪ್ರಕಾರ	1964130.85
	ವ್ಯತ್ಯಾಸ	121.65

ಅಧ್ಯಕ್ಷರು : ಉತ್ತರಗಳನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆ

ವಾಸುದೇವನ್ ಪ್ರಕರಣದ ಬಗ್ಗೆ

ಅಧ್ಯಕ್ಷರು : ನಮಗೆ ಮೂರು ಅರ್ಜಿಗಳು ಬಂದಿವೆ. ನನಗೆ ನಮ್ಮ ಸ್ನೇಹಿತರಾದ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀಮಾನ್ ಖರ್ಗೆಯವರು ಒಂದು ಕೊಟಿಟ್ಟಿದ್ದಾರೆ. ಮತ್ತು ಅವರ ಪಕ್ಷದ ಅನೇಕ ಸ್ನೇಹಿತರುಗಳು ಸಹಿ ಹಾಕಿದ್ದಾರೆ. ಮತ್ತೊಂದು ಹಿರಿಯ ಸದಸ್ಯರಾದ ವಾಟಾಳ್ ನಾಗರಾಜುರವರು ಅವರ ಕೆಲವು ಮಿತ್ರರು ಸಹಿ ಮಾಡಿ ಕೊಟ್ಟಿದ್ದಾರೆ. ಮತ್ತು ತಮ್ಮ ಪಕ್ಷದ ಕೆಲವು ಸ್ನೇಹಿತರುಗಳು ಸಹಿ ಮಾಡಿ ಕೊಟ್ಟಿದ್ದೀರಿ. ಎಲ್ಲರೂ ಒಂದೇ ವಿಷಯದ ಮೇಲೆ ಕಳುಹಿಸಿಕೊಟ್ಟಿದ್ದಾರೆ. ಎಲ್ಲರಿಗೂ ಒಟ್ಟಿಗೆ ಅವಕಾಶ ಕೊಡುತ್ತೇನೆ. ಪ್ರಸ್ತಾಪಮಾಡುವುದಕ್ಕೆ ಮೊದಲು ಖರ್ಗೆಯವರು ಕೊಟ್ಟಿದ್ದಾರೆ. ಈಗ ಖರ್ಗೆಯವರೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕಚೇರಿಗೆ ಒಂದು ಗಂಟೆ ಮುಂಚಿತವಾಗಿ ಈ ತರಹ ನಿಲುವಳಿ ಸೂಚನೆ ಕೊಡುವುದಿದ್ದರೆ ಕೊಡಬಹುದು ಎಂದು ಹೇಳಿ ನಾನು ಆಗಲೇ ಕೊಟ್ಟಿದ್ದೇನೆ. ಇವತ್ತು ಮರ್ಸಿ ಪಿಟಿಷನ್ ಅನ್ನು ಹಾಕಿಕೊಂಡು ಏನು ಮುಖ್ಯಮಂತ್ರಿಗಳು ಸುಪ್ರೀಂಕೋರ್ಟಿನಲ್ಲಿ ಒಳಗಡೆ ಕೂತಿದ್ದಾರೆ ಮತ್ತು 10.30 ಗಂಟೆಗೆ ಅಲ್ಲಿ ತೆಗೆದುಕೊಳ್ಳುತ್ತಾರೆಂಬ ಹೇಳಿ ಸುದ್ದಿ ಬಂದಿದೆ. ವಿಶೇಷವಾದ ಸಂದರ್ಭದಲ್ಲಿ ಬಹುಶಃ ಸರ್ಕಾರದಲ್ಲಿ ಬಹುಶಃ ಏನಾದರೂ ಮಾಹಿತಿಗಳು ಇರಬಹುದು, ಇದನ್ನು ಹೇಳುವುದಕ್ಕೆ ಸಿದ್ಧ ಇದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ವಿಶೇಷ ಸಂದರ್ಭವಾದ್ದರಿಂದ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬಹುದು ಎಂಬುದು ನನ್ನ ಆಸೆ. ಅದ್ದರಿಂದ ನಮ್ಮ ಕಡೆಯಿಂದ ಮಾತನಾಡುವುದಕ್ಕೆ ಸುರೇಶ್ ಅವರು ಇದ್ದಾರೆ. ಅವರು ಮಾತನಾಡುತ್ತಾರೆ.